## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ

**ಸೂಚನೆ:-**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಾದಿ ಕಾಲದಿಂದಲೂ ಬಹಳಷ್ಟು ಜೋಗಿ ಸಮುದಾಯ ಜನರು ವಾಸಿಸುತ್ತಾ ಬಂದಿರುತ್ತಾರೆ. ಈ ವರ್ಗವು ಬಹಳ ಹಿಂದುಳಿದ ಸಮಾಜವಾಗಿದ್ದು, ಎ1ರಲ್ಲಿ ಇದು ಗುರುತಿಸಲ್ಪಟ್ಟಿದೆ. ಈ ಸಮಾಜಕ್ಕೆ ಮಂಗಳೂರಿನಲ್ಲಿ ಗುರುಮಠವಿದ್ದು ಇದು ಜೋಗಿ ಸಮಾಜಕ್ಕೆ ಸೇರಿದ್ದಾಗಿದೆ. ಅದಕ್ಕೆ ಸಾವಿರ ವರ್ಷದ ಇತಿಹಾಸವಿರುತ್ತದೆ. ಈ ಸಮುದಾಯಕ್ಕೆ ಕೋಡಿಯಲ್ ಬೈಲ್ ಗ್ರಾಮದ ಸರ್ವೇ.ನಂಬ್ರ 1557/1ರಲ್ಲಿ 2.78ರಲ್ಲಿ -1.57, 1557/2ರಲ್ಲಿ 0.13 ಸೆಂಟ್ಸ್ ನೀಡಲಾಗಿದ್ದು, ಅದನ್ನು ಮತ್ತೆ ಬೇರೆ ಬೇರೆ ಉದ್ದೇಶಕ್ಕಾಗಿ ನೀಡಲಾಗಿದೆ. ಈಗ ಕೇವಲ 0.17 ಸೆಂಟ್ಸ್ ಜಾಗವು ಉಳಿದಿದ್ದು, ಜೋಗಿ ಸಮುದಾಯದವರ ಹೆಸರಿನಲ್ಲಿ ಕಂ.ಇ.ಸಿ ನಂಬ್ರ 2162019ರ ಕಡತ ಸಂಪುಟದಲ್ಲಿ ಮಂಡಿಸಲಾಗಿದ್ದು, ಈ ಬಗ್ಗೆ ಕೈಗೊಂಡ ತೀರ್ಮಾನದ ಬಗ್ಗೆ ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವ ಬಗ್ಗೆ.

**ಉತ್ತರ:-**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಕೊಡಿಯಾಲ್ ಬೈಲ್ ಎ ಗ್ರಾಮದ ಟಿ.ಎಸ್ ನಂಬರ್ 1557/3ಪಿ2 ರಲ್ಲಿ 0.17 ಎಕರೆ ಜಮೀನು ಪೊರಂಬೋಕು ಜಮೀನಾಗಿರುತ್ತದೆ. ನಿಯಮಾನುಸಾರ ಪೊರಂಬೋಕು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮಾತ್ರ ವಿರಹಿತಪಡಿಸಲು ಅವಕಾಶವಿರುತ್ತದೆ. ಸದರಿ ಜಮೀನು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಮೀನಗಳನ್ನು ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ, ಸದರಿ ಜಮೀನನ್ನು ದಕ್ಷಿಣ ಕನ್ನಡ ಜೋಗಿ ಸಮಾಜ ಸುಧಾರಕ ಸಂಘ ಇವರಿಗೆ ಮಂಜೂರು ಮಾಡುವ ಕುರಿತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಛೇರಿಯ ಪತ್ರ ಸಂಖ್ಯೆ:ಎಲ್.ಎನ್.ಡಿ(1)ಪಿಡಿಆರ್.ಸಿಆರ್. 148/2014-15/137743 ದಿನಾಂಕ:07.06.2016 ರಂತೆ ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಈ ಮಧ್ಯೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕೊಡಿಯಾಲ್ ಬೈಲ್ 'ಎ' ಗ್ರಾಮದ ಟಿ.ಎಸ್.ನಂಬರ್ 1557/3ಪಿ2 ರಲ್ಲಿ ಉಳಿಕೆ 0.23 ಎಕರೆ ಜಮೀನನ್ನು ಮಂಜೂರು ಮಾಡುವಂತೆ ದಿನಾಂಕ:20.12.2017ರ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಕೋರಲಾಗಿದ್ದ ಜಮೀನು ಹಾಗೂ ಜೋಗಿ ಸಮಾಜ ಸುಧಾರಕ ಸಂಘಕ್ಕೆ ಮಂಜೂರು ಮಾಡಲು ಕೋರಿರುವ ಜಮೀನುಗಳು ಒಂದೇ ಆಗಿದ್ದು, ಪಹಣಿ ಪತ್ರಿಕೆಯಂತೆ ಲಭ್ಯವಿರುವ ಸ.ನಂ 1557/3ಪಿ2 ರ 0.17 ಎಕರೆ ಸರ್ಕಾರಿ ಜಮೀನನ್ನು ಬಸ್ ನಿಲ್ದಾಣದ ಉದ್ದೇಶಕ್ಕಾಗಿ ಹಸ್ತಾಂತರಿಸುವುದು ಸೂಕ್ತ ಎಂಬ ವರದಿಯನ್ನು ಜಿಲ್ಲಾಧಿಕಾರಿಯವರು ಸಲ್ಲಿಸಿದ್ದರು.

ಅದರಂತೆ, ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 67 ಎಲ್‌ಜಿಎ 2016, ದಿನಾಂಕ 30.05.2019 ರಂತೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್ ಎ ಗ್ರಾಮದ ಸ.ನಂ 1557/3ಪಿ ರಲ್ಲಿನ 23 ಸೆಂಟ್ ಜಮೀನನ್ನು ಹಾಲಿ ಇರುವ ಬಸ್ ನಿಲ್ದಾಣದ ವಿಸ್ತರಣೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 20(1) (ಸಿ) ರಂತೆ ಮಾರುಕಟ್ಟೆ ದರದ ಶೇಕಡ 50 ರಷ್ಟು ದರ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಮಂಜೂರು ಮಾಡಲಾಗಿರುತ್ತದೆ.

**(ಕಡತ ಸಂಖ್ಯೆ: ಕಂಇ 30 ಎಲ್‌ಜಿಎ 2025)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು